# ***SCCH-17***

***WITNESS CALLED AND DULY SWORN ON :05.03.2025***

***EXAMINATION IN CHIEF BY COUNSEL FOR PETITIONER:***

*Today I have filed my affidavit in lieu of examination in chief. The said affidavit is prepared as per my instructions. The contents of t*he affidavit are true and correct to the best of my knowledge and belief. I have sworn accordingly.

The documents produced by me may be marked as Exhibits.

The documents that are produced by the witness are marked as follows:

| | |
|---|---|
| Ex.P13 | True copy of Intimation |
| Ex.P14 | True copy of Wound certificate |
| Ex.P15 | Notarized copy of my Aadhar Card (Original is compared with notarized copy, found correct and returned to witness) |
| Ex.P16 | Discharge summary |
| Ex.P17 | Medical bills |

***CROSS EXAMINATION BY LEARNED COUNSEL RESPONDENT NO.2*:**

ನಾನು ಗಾರೆ ಕೆಲಸ ಮಾಡುತ್ತಿದ್ದೆ. ನನಗೆ ಪ್ರತಿ ದಿವಸ ಗಾರೆ ಕೆಲಸ ಇತ್ತು. ಒಬ್ಬನೇ ಶ್ರೀನಿವಾಸ ಎನ್ನುವ ಮೇಸ್ತ್ರಿ ಹತ್ತಿರ ಕೆಲಸ ಮಾಡುತ್ತಿದ್ದೆ. ನನಗೆ ದಿನಕ್ಕೆ 700 ರಿಂದ 800 ರೂಪಾಯಿ ಕೂಲಿ ಇತ್ತು. ವಾರದಲ್ಲಿ ಭಾನುವಾರ ರಜಾ ದಿನ ಇತ್ತು. ನಾನು ಶ್ರೀನಿವಾಸ ಎನ್ನುವ ಮೇಸ್ತ್ರಿ ಹತ್ತಿರ ಕೆಲಸ ಮಾಡುತ್ತಿದ್ದೆ ಮತ್ತು ನನಗೆ ದಿನಕ್ಕೆ 700 ರೂಪಾಯಿ ಕೂಲಿ ಇತ್ತು ಎನ್ನುವ ಕುರಿತಂತೆ ಶ್ರೀನಿವಾಸ್ ರವರನ್ನು ವಿಚಾರಣೆ ಮಾಡಬಹುದು.

ಆ ದಿನ ನಾನು ಹಿರಗಾನ್ ಪಲ್ಲಿಯಿಂದ ಚಿಂತಾಮಣಿಗೆ ಹೋಗುತ್ತಿದ್ದೆ. ಗಾಡಿಯನ್ನು ನಾನೇ ಓಡಿಸುತ್ತಿದ್ದೆ. ಸದರಿ ಮೋಟಾರ್ ಸೈಕಲ್ ನನಗೆ ಸೇರಿತ್ತು. ನನಗೆ ಡಿಎಲ್ ಇದ್ದು, ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತವಾದ ಜಾಗದಲ್ಲಿ ರಸ್ತೆ ನೇರವಾಗಿದೆ. ಎದುರಿನಿಂದ ಬರುವ ವಾಹನವನ್ನು ಸುಮಾರು 25 ಮೀಟರ್ ಅಂತರದಿಂದ ನೋಡಬಹುದು. ಅಪಘಾತ ರಾತ್ರಿ 8.00 ಗಂಟೆಗೆ ಆಗಿರುತ್ತದೆ. ಕಾರು ಎದುರಿನಿಂದ ಬಂದಿರುತ್ತದೆ. ಸದರಿ ಕಾರು ಹೆಡ್ ಲೈಟ್ ಗಳನ್ನು ಹಾಕಿಕೊಳ್ಳದೇ ಬಂದಿರುತ್ತದೆ ಹಾಗಾಗಿ ಕಾಣಿಸಿರುವುದಿಲ್ಲ. ನಾನು ರಾತ್ರಿಯಾಗಿದ್ದರಿಂದ ಅತಿವೇಗದಿಂದ ಗಾಡಿಯನ್ನು ಮದ್ಯೆದ ರಸ್ತೆಯಲ್ಲಿ ಓಡಿಸಿಕೊಂಡು ಹೋಗಿ ಅಪಘಾತಪಸಿಡಿರುತ್ತಾನೆ ಎಂದರೆ ಸರಿಯಲ್ಲ.

ಚಿಂತಾಮಣಿಯ ಸರ್ಕಾರಿ ಅಸ್ಪತ್ರೆಗೆ ಮೊದಲಿಗೆ ಹೋಗಿರುತ್ತೇವೆ. ನನ್ನ ಬಲಗೈ ಮತ್ತು ಬಲಗಾಲಿನ ಪಾದಕ್ಕೆ ಪೆಟ್ಟಾಗಿದ್ದು, ಬಲಗಾಲಿನ ಪಾದ ತೆಗೆದಿರುತ್ತಾರೆ.

ವಿಕ್ಟೋರಿಯ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಆಗಿದ್ದು ಅಲ್ಲಿ ನನಗೆ ಚಿಕಿತ್ಸೆ ರಿಯಾಯಿತಿ ದರದಲ್ಲಿ ದೊರಕಿದ್ದರೂ ಔಷದಿಗಳಿಗೆ ಖರ್ಚಾಗಿರುತ್ತದೆ. ಚಿಕಿತ್ಸೆ ನೀಡಿದ ವೈದ್ಯರುಗಳ ಹೆಸರು ನೆನಪಿಲ್ಲ. 1 ಲಕ್ಷ ಖರ್ಚಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ 17 ರ ಕ್ರಮ ಸಂಖ್ಯೆ 13 ರ ಬಿಲ್ duplicate bill ಎಂದರೆ ಸರಿ.

ನಾನು ಈಗ ಏನೂ ಕೆಲಸ ಮಾಡುತ್ತಿಲ್ಲ. ನನ್ನ ಹೆಂಡತಿ ನನ್ನನ್ನು ನೋಡಿಕೊಳ್ಳುತ್ತಿದ್ದಾರೆ. ನಾನು ಮುಂಚಿನಿಂದಲೂ ಯಾವುದೇ ಕೆಲಸ ಮಾಡದೇ ನನ್ನ ಹೆಂಡತಿಯ ಮೇಲೆ ಆದಾರವಾಗಿದ್ದರೂ ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಂಚಿನಂತೆಯೇ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಪ್ಪಿನಿಂದಲೇ

ಅಪಘಾತವಾಗಿದ್ದರೂ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**19 ನೇ ಹೆಚ್ಚುವರಿ ನ್ಯಾಯಾಧೀಶರು**
**ಲಘು ವ್ಯವಹಾರಗಳ ನ್ಯಾಯಾಲಯ**
**ಬೆಂಗಳೂರು.**